**2ನೇ ಅಧಿಕ ಜಿಲ್ಲಾ ಮತ್ತು ಸೆಷನ್ಸ್ ನ್ಯಾಯಾಲಯ, ಹಾಸನ,**

**ಎಸ್.ಸಿ.ನಂಃ– 225/2023**

ಪಿ.ಡಬ್ಲ್ಯೂಃ– 8
ಸಿ.ಡಬ್ಲ್ಯೂಃ– 9

| | | |
|---|---|---|
| ಸಾಕ್ಷಿದಾರರ ಹೆಸರುಃ | : | ದಾಕ್ಷಾಯಿಣಿ |
| ಗಂಡನ ಹೆಸರುಃ | : | ಶಿವಣ್ಣ |
| ವಯಸ್ಸುಃ | : | 50 ವರ್ಷ |
| ವೃತ್ತಿಃ | : | ಗೃಹಿಣಿ |
| ವಾಸಃ | : | ಕಲ್ಲಳ್ಳಿ ಗ್ರಾಮ, ಹೊಳೇನರಸೀಪುರ ತಾಃ. |

**ದಿನಾಂಕಃ 14–08–2025 ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.**

**ಮುಖ್ಯ ವಿಚಾರಣೆಃ ಸರ್ಕಾರಿ ಅಭಿಯೋಜಕರಿಂದಃ**

ನ್ಯಾಯಾಲಯದ ಮುಂದಿರುವ ಆರೋಪಿತ ಚಂದ್ರಮೌಳಿ ಗೊತ್ತು. ನನ್ನ ಸಂಬಂಧಿ ಅಂಬಿಕಾ ರವರನ್ನು ಆರೋಪಿ ಚಂದ್ರಮೌಳಿಗೆ ಕೊಟ್ಟು ವಿವಾಹ ಮಾಡಲಾಗಿತ್ತು. ಮೃತ ಅಂಬಿಕಾ ರವರು ಹಾಸನದ ಗಾರ್ಮೆಂಟಿನಲ್ಲಿ ಕೆಲಸ ಮಾಡುತ್ತಿದ್ದಳು. 2 ವರ್ಷದ ಹಿಂದೆ ಆರೋಪಿತ ಚಂದ್ರಮೌಳಿ ಆತನ ಪತ್ನಿ ಅಂಬಿಕಾ ರವರನ್ನು ಅಂಕನಹಳ್ಳಿ ಫಾರೆಸ್ಟಿಗೆ ಕರೆದುಕೊಂಡು ಹೋಗಿ ಆಕೆಗೆ ಕಲ್ಲಿನಿಂದ ಹೊಡೆದು ಕೊಲೆ ಮಾಡಿರುವ ಬಗ್ಗೆ ನನಗೆ ತಿಳಿದು ಬಂತು. ವಿಷಯ ತಿಳಿದ ನಾನು ಅಂಕನಹಳ್ಳಿ ಗ್ರಾಮದ ಫಾರೆಸ್ಟಿಗೆ ಹೋಗಿ ಮೃತ ಅಂಬಿಕಾ ರವರ ಶವವನ್ನು ನೋಡಿರುತ್ತೇನೆ. ಮೃತ ಅಂಬಿಕಾರವರ ಮುಖ ಹಾಗೂ ತಲೆಗೆ

ಗಾಯ ಆಗಿತ್ತು. ಪೊಲೀಸರು ಮೃತ ಅಂಬಿಕಾ ರವರ ಶವದ ಮೇಲೆ ಅಂಕನಹಳ್ಳಿ ಗ್ರಾಮದ ಫಾರೆಸ್ಟಿನಲ್ಲಿ ಶವತನಿಖಾ ವರದಿಯನ್ನು ತಯಾರಿಸಿದ ಕಾಲದಲ್ಲಿ ನಾನು ಹಾಜರಿದ್ದು ನನ್ನ ಸಹಿ ಮಾಡಿರುತ್ತೇನೆ. ಸಾಕ್ಷಿದಾರರು ಗುರುತಿಸಿದ ಶವತನಿಖಾ ವರದಿಯನ್ನು ನಿಪಿ–25 ಎಂದು ಗುರುತಿಸಲಾಯಿತು. ನಿಪಿ–25 ರಲ್ಲಿ ಸಾಕ್ಷಿದಾರರು ಗುರುತಿಸಿದ ಅವರ ಸಹಿಯನ್ನು ನಿಪಿ–25(ಎ)ಎಂದು ಗುರುತಿಸಲಾಯಿತು. ಪೊಲೀಸರು ಮೃತ ಅಂಬಿಕಾ ರವರ ಶವ ಅಂಕನಹಳ್ಳಿ ಫಾರೆಸ್ಟಿನಲ್ಲಿ ಬಿದ್ದಿರುವ ಬಗ್ಗೆ ಪೋಟೋಗಳನ್ನು ಸಹ ತೆಗೆದಿರುತ್ತಾರೆ. ಈಗ ನಾನು ನೋಡುತ್ತಿರುವ ನಿಪಿ–9 ರಿಂದ 12 ಪೋಟೋಗಳು ಪೊಲೀಸರು ಶವತನಿಖಾ ವರದಿ ಕಾಲದಲ್ಲಿ ತೆಗೆದಿರುವ ಪೋಟೋಗಳು ಆಗಿರುತ್ತವೆ. ನಿಪಿ–12 ಪೋಟೋವಿನಲ್ಲಿ ಸಾಕ್ಷಿದಾರರು ತಮ್ಮ ಇರುವಿಕೆಯನ್ನು ಹಾಗೂ ತಾವು ನಿಪಿ–25 ಶವತನಿಖಾ ವರದಿಗೆ ಸಹಿ ಮಾಡುತ್ತಿರುವುದನ್ನು ಗುರುತಿಸಿರುತ್ತಾರೆ. ಅಂಬಿಕಾ ರವರ ಗಂಡನಾದ ಆರೋಪಿತ ಆಕೆಯನ್ನು ಯಾವ ಕಾರಣಕ್ಕಾಗಿ ಕೊಲೆ ಮಾಡಿದ ಎಂದು ನನಗೆ ತಿಳಿದಿಲ್ಲ.

(ಈ ಹಂತದಲ್ಲಿ ಮಾನ್ಯ ಪಿಪಿ ರವರು ಸಾಕ್ಷಿಯನ್ನು ಭಾಗಶಃ ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಿ ಪಾಟೀ ಸವಾಲು ಮಾಡಲು ಅನುಮತಿ ಕೋರಿದ್ದು, ಅನುಮತಿ ನೀಡಲಾಯಿತು)

**ಪಾಟೀ ಸವಾಲುಃ ಸರ್ಕಾರಿ ಅಭಿಯೋಜಕರಿಂದಃ**

2. ಮೃತ ಅಂಬಿಕಾಳು ಯಾರೋ ಹುಡುಗನ ಜೊತೆ ಬೈಕಿನಲ್ಲಿ ಹೋಗುತ್ತಿರುವುದನ್ನು ನೋಡಿದ ಆರೋಪಿ ಅಂಬಿಕಾ ರವರ ಮೇಲೆ ಅನುಮಾನಗೊಂಡು ಆಕೆಯನ್ನು ಅಂಕನಹಳ್ಳಿ ಫಾರೆಸ್ಟಿಗೆ ಕರೆತಂದು ಕೊಲೆ ಮಾಡಿರುತ್ತಾನೆ ಎಂದರೆ ನನಗೆ

ತಿಳಿದಿಲ್ಲ.

**<u>ಪಾಟೀ ಸವಾಲುಃ ಆರೋಪಿ ಪರ ಡಿಫೆನ್ಸ್ ಕೌನ್ಸಿಲ್ ರವರಿಂದ</u>**

3. ಮಧ್ಯಾಹ್ನ 12 ರಿಂದ 1 ಗಂಟೆಯ ಸಮಯಕ್ಕೆ ನಾನು ಅಂಕನಹಳ್ಳಿ ಫಾರೆಸ್ಟಿಗೆ ಹೋಗಿರುತ್ತೇನೆ. ಸಂಜೆ ಸುಮಾರು 4 ಗಂಟೆಯವರೆಗೂ ನಾನು ಸ್ಥಳದಲ್ಲಿ ಇದ್ದೆ. ಘಟನೆಯ ಬಗ್ಗೆ ನನಗೆ ಖುದ್ದು ಮಾಹಿತಿ ಇರುವುದಿಲ್ಲ ಎಂದರೆ ಸರಿ. ನಾನು ಸ್ಥಳಕ್ಕೆ ಹೋದ ಕಾಲದಲ್ಲಿ ನಮ್ಮ ಊರಿನ ಜನರು ಹಾಗೂ ಸಂಬಂಧಿಕರು ಹಾಜರಿದ್ದರು. ಸ್ಥಳದಲ್ಲಿ ಸೋಮಶೇಖರ, ಸರೋಜಮ್ಮ ಹಾಗೂ ಇತರರು ಇದ್ದರು. ನಿಪಿ–25 ಶವತನಿಖಾ ವರದಿಯನ್ನು ಮಧ್ಯಾಹ್ನ 3 ಗಂಟೆಯ ನಂತರ ಬರೆದಿರಬಹುದು. ಶವತನಿಖಾ ಕಾಲದಲ್ಲಿ ಹಾಜರಿರುವಂತೆ ಕೋರಿ ಪೊಲೀಸರು ನೋಟೀಸು ನೀಡಿಲ್ಲ. ಶವತನಿಖಾ ಕಾಲದಲ್ಲಿ ಪೊಲೀಸರು ನನ್ನನ್ನು ವಿಚಾರಣೆ ಮಾಡಿಲ್ಲ. ನಾನು ತಿಳಿಸಿರುವಂತೆ ಅಂಕನಹಳ್ಳಿ ಗ್ರಾಮದ ಫಾರೆಸ್ಟಿಗೆ ಹೋಗಿಲ್ಲ ಹಾಗೂ ನಿಪಿ–25 ಶವತನಿಖಾ ವರದಿಗೆ ನಾನು ಸ್ಥಳದಲ್ಲಿ ನನ್ನ ಸಹಿ ಮಾಡಿಲ್ಲ ಎಂದರೆ ಸರಿಯಲ್ಲ. ನನ್ನ ಜೊತೆ ನಿಪಿ–25 ದಾಖಲಾತಿಗೆ ಸುರೇಶ್‌ರವರು ಅವರ ಸಹಿ ಮಾಡಿರುತ್ತಾರೆ. ನಿಪಿ–25 ದಾಖಲಾತಿಗೆ ನಾನು ಸ್ಥಳದಲ್ಲಿ ಸಹಿ ಮಾಡದೆ ಪೊಲೀಸ್ ಠಾಣೆಯಲ್ಲಿ ಸಹಿ ಮಾಡಿರುತ್ತೇನೆ ಎಂದರೆ ಸರಿಯಲ್ಲ. ಘಟನೆಯ ಬಗ್ಗೆ ಯಾವುದೇ ಮಾಹಿತಿ ಇಲ್ಲದಿದ್ದರೂ ಸಹ ಮೃತ ಅಂಬಿಕಾ ನನ್ನ ಸಂಬಂಧಿಯಾದ ಕಾರಣ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ನಿಪಿ–9 ರಿಂದ 12 ಫೋಟೋಗಳನ್ನು ಯಾವ ದಿನಾಂಕದಂದು ಯಾರು ಯಾವ ಕ್ಯಾಮರಾದಿಂದ ತೆಗೆದಿರುತ್ತಾರೆಂದು ನನಗೆ ತಿಳಿದಿಲ್ಲ.

ಆರೋಪಿತ ಆತನ ಪತ್ನಿ ಅಂಬಿಕಾ ರವರನ್ನು ಕೊಲೆ ಮಾಡದಿದ್ದರೂ ಸಹ ನಾನು ಆರೋಪಿತನ ವಿರುದ್ಧ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**ಮರು ವಿಚಾರಣೆ: ಇಲ್ಲ**

(ಸಾಕ್ಷಿಯ ಸಾಕ್ಷ್ಯವನ್ನು ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದಂತೆ ಬೆರಳಚ್ಚು ಮಾಡಿಸಲಾಯಿತು)

ಓ.ಹೇ.ಕೇ.ಸರಿ ಇದೆ.

2ನೇ ಅಧಿಕ ಜಿಲ್ಲಾ ಮತ್ತು ಸೆಷನ್ಸ್
ನ್ಯಾಯಾಧೀಶರು, ಹಾಸನ.